ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY, RESEARCH AND REFERENCE BRANCH

ಪತ್ರಿಕಾ ತುಣುಕುಗಳು
PAPER CLIPPINGS

ಶಾಖೆ / ವಿಷಯ : DEPARTMENT / SUBJECT:

ಪತ್ರಿಕೆಯ ಹೆಸರು : NAME OF THE NEWS PAPER:

ದಿನಾಂಕ : DATE:

# ಅತಿಕ್ರಮಣಕಾರರು ಸಕ್ರಮಕ್ಕೆ ಹಕ್ಕು ಮಂಡಿಸುವಂತಿಲ್ಲ

## ಹರಿಯಾಣದ ಪ್ರಕರಣವೊಂದಲ್ಲಿ ಮಹತ್ವದ ತೀರ್ಪು ನೀಡಿದ ಸುಪ್ರೀಂ ಕೋರ್ಟ್

**ಹೊಸದಿಲ್ಲಿ:** ಸರಕಾರಿ ಅಥವಾ ಪಂಚಾಯಿತಿ ಭೂಮಿಯನ್ನು ಅತಿಕ್ರಮಣ ಮಾಡಿಕೊಂಡು ಕಟ್ಟಡಗಳನ್ನು ನಿರ್ಮಿಸಿಕೊಂಡವರು ಭೂಮಿ ಸಕ್ರಮಗೊಳಿಸುವಂತೆ ಹಕ್ಕು ಮಂಡಿಸುವಂತಿಲ್ಲ ಎಂದು ಸುಪ್ರೀಂ ಕೋರ್ಟ್ ಮಹತ್ವದ ತೀರ್ಪು ನೀಡಿದೆ.



''ಸರಕಾರಿ ಅಥವಾ ಪಂಚಾಯಿತಿ ಭೂಮಿಯನ್ನು ಅತಿಕ್ರಮಿಸಿಕೊಂಡವರು ಒತ್ತುವರಿ ತೆರವು ಸಮಸ್ಯೆ ಎದುರಿಸುವ ಸಂದರ್ಭದಲ್ಲಿ ನ್ಯಾಯಾಲಯದ ಮೊರೆ ಹೋಗುವುದು ಸಾಮಾನ್ಯ. ಆದರೆ ಇಂತಹ ಅತಿಕ್ರಮಣವನ್ನು ಸಕ್ರಮ ಮಾಡುವುದು ರಾಜ್ಯ ಸರಕಾರದ ವಿವೇಚನೆಗೆ ಬಿಟ್ಟ ವಿಚಾರವಾಗಿದೆ. ಇಲ್ಲಿ ಸಂಬಂಧಿತ ನಿಯಮಗಳಲ್ಲಿರುವ ಷರತ್ತುಗಳ ಪರಿಮಿತಿಯೊಳಗೆ ನಿರ್ಧಾರ ಕೈಗೊಳ್ಳಬೇಕಾಗುತ್ತದೆ. ಅತಿಕ್ರಮಣಕಾರರು ಸಕ್ರಮಗೊಳಿಸುವಂತೆ ಹಕ್ಕು ಮಂಡಿಸುವಂತಿಲ್ಲ'' ಎಂದು ನ್ಯಾಯಮೂರ್ತಿಗಳಾದ ಡಿ.ವೈ.ಚಂದ್ರಚೂಡ್ ಮತ್ತು ಎಂ.ಆರ್.ಶಾ ಅವರನ್ನೊಳಗೊಂಡ ನ್ಯಾಯ ಪೀಠ ಹೇಳಿದೆ.

ಹರಿಯಾಣದ ಸೋನೆಪತ್ ಜಿಲ್ಲೆಯ ಗೊಹಾನಾ ತಾಲೂಕಿನ ಸರ್ಸಾದ್ ಗ್ರಾಮದ ನಿವಾಸಿಗಳು, ತಮ್ಮ ಕಟ್ಟಡಗಳನ್ನು ಸಕ್ರಮಗೊಳಿಸುವಂತೆ ಕೋರಿ ಸಲ್ಲಿಸಿದ್ದ ಅರ್ಜಿ ವಿಚಾರಣೆ ವೇಳೆ ನ್ಯಾಯಪೀಠ ಈ ಆದೇಶ ನೀಡಿದೆ.

ಹರಿಯಾಣ ಸರಕಾರವು 2000ನೇ ಇಸವಿಯಲ್ಲಿ 'ಶಮ್ಲಾತ್ ದೇಹ್' ಎಂಬ ಪ್ರದೇಶದ ಹೊರಗೆ ಕೆಲವರು ಅನಧಿಕೃತವಾಗಿ ಸ್ವಾಧೀನಪಡಿಸಿಕೊಂಡಿದ್ದ ಪಂಚಾಯಿತಿ ಭೂಮಿಯನ್ನು ಮಾರಾಟ ಮಾಡುವ ಸಂಬಂಧ ನೀತಿಯೊಂದನ್ನು ರೂಪಿಸಿತ್ತು. ಇದೇ ವಿಚಾರವಾಗಿ ಹರಿಯಾಣ ಸರಕಾರ 1964ರ 'ಪಂಜಾಬ್ ವಿಲೇಜ್ ಕಾಮನ್ ಲ್ಯಾಂಡ್ಸ್ (ನಿಯಂತ್ರಣ)' ನಿಯಮಗಳಿಗೆ ತಿದ್ದುಪಡಿ ತಂದು, 2008ರಲ್ಲಿ ಅಧಿಸೂಚನೆಯನ್ನೂ ಹೊರಡಿಸಿತು. ಇದಾದ ನಂತರ, 2008ರ ಜನವರಿ 3ರಂದು ಹೊರಡಿಸಲಾಗಿದ್ದ ಅಧಿಸೂಚನೆಯಲ್ಲಿ ಹೊಸದಾಗಿ ಮಾರ್ಪಾಡುಗಳನ್ನು ಮಾಡಿ, ಗ್ರಾಮ ಪಂಚಾಯಿತಿಗೆ ಕೃಷಿಯೇತರ ಭೂಮಿಯನ್ನು ಶಮ್ಲಾತ್ ದೇಹ್‌ನಲ್ಲಿ (ಖಾಲಿ ಭೂಮಿ) ನಿವಾಸಿಗಳಿಗೆ ಮಾರಾಟ ಮಾಡಲು ಅಧಿಕಾರ ನೀಡಿತು. ಇದು ಆದಾಗಲೇ ಪಂಚಾಯಿತಿ ಜಾಗದಲ್ಲಿ ಅನಧಿಕೃತವಾಗಿ ಕಟ್ಟಡ ನಿರ್ಮಿಸಿಕೊಂಡವರಿಗೆ ತೊಡಕಾಗಿ ಪರಿಣಮಿಸಿತು.

ಆಗ, ಅನಧಿಕೃತವಾಗಿ ಕಟ್ಟಡ ನಿರ್ಮಿಸಿಕೊಂಡವರು ಹಾಗೂ ಭೂಮಿ ಒತ್ತುವರಿ ಮಾಡಿಕೊಂಡವರು ಸಕ್ರಮಗೊಳಿಸುವಂತೆ ಪಂಜಾಬ್ ಮತ್ತು ಹರಿಯಾಣ ಹೈಕೋರ್ಟ್ ಮೊರೆ ಹೋಗಿದ್ದರು. ಆದರೆ ಅರ್ಜಿಯನ್ನು ಹೈಕೋರ್ಟ್ ವಜಾಗೊಳಿಸಿತು. ಇದನ್ನು ಪ್ರಶ್ನಿಸಿ ಅರ್ಜಿದಾರರು ಸುಪ್ರೀಂ ಮೊರೆ ಹೋಗಿದ್ದರು.